**ಎಫ್.ಡಿ.ಪಿ. ನಂಬ್ರ: 12/2017 ಪಿ.ಡಬ್ಲ್ಯೂ :1**

ದಿನಾಂಕಃ 08-01-2021

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

ಪಾಟೀ ಸವಾಲು ಃ ಶ್ರೀ ಟಿ.ಬಿ.ಎಸ್ ವಕೀಲರಿಂದ

ಮೂಲ ದಾವೆಯಲ್ಲಿ ತೀರ್ಪು ಆಗಿದ್ದು ದಿಃ 07-07-2006 ರಂದು ಎಂದರೆ ಸರಿಯಲ್ಲ, ನಾನು ದಾವಾ ಆಸ್ತಿಯ ಐಟಂ ನಂಬ್ರ 13 ನ್ನು ದಿಃ 08-05-2007 ರಂದು ಖರೀದಿ ಮಾಡಿರುತ್ತೇನೆಂದರೆ ನಿಜ. ನಾನು ಕ್ರಯ ಮಾಡಿದ ದಿನದಂದು ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಮೂಲ ದಾವೆಯ ತೀರ್ಪು ಪ್ರಶ್ನಿಸಿ ಮೇಲ್ಮನವಿ ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಇರುವ ಬಗ್ಗೆ ನನಗೆ ಗೊತ್ತಿರಲಿಲ್ಲ. ದಾವಾ ಆಸ್ತಿಗಳು ಎಲ್ಲೆಲ್ಲಿ ಇರುತ್ತವೆ ಹಾಗೂ ಅವುಗಳ ಚೆಕ್ಕು ಬಂದಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಗಳ ಒಟ್ಟು ಮೌಲ್ಯ ನನಗೆ ಹೇಳಲು ಬರುವುದಿಲ್ಲ. ನಾನು ಕ್ರಯ ಮಾಡಿರುವ ವಿಕ್ರಯದಾರರ ಪಾಲಿಗೆ ಎಷ್ಟು ಮೌಲ್ಯದ ದಾವಾ ಆಸ್ತಿ ಬರುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಖರೀದಿಸಿರುವ ಐಟಂ ನಂಬ್ರ 13 ವಿಕ್ರಯದಾರರ ಪಾಲಿಗೆ ಬರುತ್ತಾ ಇಲ್ಲವಾ ಎಂದು ನನಗೆ ಗೊತ್ತಿಲ್ಲ. ಆದರೆ ನಾನು ಖರೀದಿ ಮಾಡಿರುವ ಆಸ್ತಿಯನ್ನು ನನಗೆ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ವಿಕ್ರಯದಾರರ ಪಾಲಿಗೆ ನನಗೆ ಮಾರಾಟ ಮಾಡಿದ ಆಸ್ತಿಯಷ್ಟು ಪಾಲು ಬರುವುದಿಲ್ಲ ಆದ್ದರಿಂದ ನಾನು ಖರೀದಿ ಮಾಡಿದ ಆಸ್ತಿಯನ್ನು ನನಗೆ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಎ.ಬಿ .ಎಸ್ ವಕೀಲರು ಎದುರುದಾರ ಸಂಖ್ಯೆ 1 ರಿಂದ 10, 33
(ಶ್ರೀ ಎಂ.ಎಸ್.ಎ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು)

**ಓ.ಹೇ.ಕೇ.ಸ.ಇದೆ** **ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಕುಂದಾಪುರ**